ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ **2980/2023**

ಫಿರ್ಯಾದುದಾರರು:- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರು:- ರಾಮ ಮತ್ತು ಇತರರು

ದೋಷಾರೋಪಣೆ

ಶ್ರೀಮತಿ ಅಮ್ರಿನ್ ಸುಲ್ತಾನ, ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

1. ರಾಮ ಬಿನ್ ಮಂಜಪ್ಪ, ಸುಮಾರು 26 ವರ್ಷ, ವಾಸ : ಹೋರಿತಿಮ್ಮನಹಳ್ಳಿ, ಬೀರೂರು ಹೋಬಳಿ, ಕಡೂರು ತಾ:
2. ರೇವಣ್ಣ ಬಿನ್ ಸಿದ್ದಪ್ಪ, ಸುಮಾರು 33 ವರ್ಷ, ವಾಸ : ಬಿ ಕೋಡಿಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು.
3. ಆಕಾಶ್ ಬಿನ್ ಅಜ್ಜಪ್ಪ, ಸುಮಾರು 44 ವರ್ಷ, ಸುಮಾರು 22 ವರ್ಷ, ವಾಸ : ಬಿ ಕೋಡಿಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆ:

ದಿನಾಂಕ : 24.08.2022 ರಂದು ರಾತ್ರಿ 1.30 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ವ್ಯಾಪ್ತಿಯ ಕಡೂರು ಟೌನ್ ನ ಶ್ರೀ ಸುಬ್ರಮಣ್ಯ ವೇ ಬ್ರಿಡ್ಜ್ ಮುಂದೆ ಹಾದು ಹೋಗಿರುವ ಎನ್.ಹೆಚ್. 206 ರಸ್ತೆಯ ಪಕ್ಕದ ಪುಟ್ ಪಾತ್‌ನಲ್ಲಿ ಚಾಸಾ-1 ಗಿರೀಶರವರು ಎಳನೀರು ಅನ್ ಲೋಡ್ ಮಾಡುತ್ತಿರುವಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನೀನು ನಿನ್ನ ದೊಡ್ಡಮ್ಮರವರಿಗೆ ಸಪೋರ್ಟ್ ಮಾಡುತ್ತೀಯಾ, ಸೂಳೇ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ **504** ಸಹಕಲಂ **34** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಚಾಸಾ-1 ರವರಿಗೆ ಕೈಯಿಂದ ಹೊಡೆದು ಸ್ವಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ

ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ **323** ಸಹಕಲಂ **34** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ನಿಮ್ಮಗಳ ಪೈಕಿ 3 ನೇ ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ ಚಾಸಾ-1 ರವರ ತಲೆಗೆ ಹೊಡೆದಿದ್ದು, 2 ನೇ ಆರೋಪಿಯಾದ ನೀವೂ ಸಹ ಕಬ್ಬಿಣದ ರಾಡಿನಿಂದ ಚಾಸಾ-1 ರವರ ಎಡ ಕೈ ಹತ್ತಿರ ಹೊಡೆದು ಸ್ವಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ **324** ಸಹಕಲಂ **34** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಇನ್ನೊಂದು ಸಾರಿ ನಿನ್ನ ದೊಡ್ಡಮ್ಮರವರಿಗೆ ಸಪೋರ್ಟ್ ಮಾಡಿದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ **506** ಸಹಕಲಂ **34** ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ಸಂ.1- ನೀಮಗೆ ಈ ಮೇಲಿನ ಆರೋಪವನ್ನು ಓದಿ ಹೇಳಿದ್ದು, ಅರ್ಥ ಮಾಡಿಕೊಂಡಿರುವಿರಾ?
1 ನೇ ಆರೋಪಿಯ ಉತ್ತರ: ತಿಳಿಯಿತು
2 ನೇ ಆರೋಪಿಯ ಉತ್ತರ:ತಿಳಿಯಿತು
3 ನೇ ಆರೋಪಿಯ ಉತ್ತರ:ತಿಳಿಯಿತು

ಪ್ರ.ಸಂ.2- ನೀವು ಈ ಆರೋಪವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?
ಆರೋಪಿಯ ಉತ್ತರ:
1 ನೇ ಆರೋಪಿಯ ಉತ್ತರ: ವಿಚಾರಣೆಯಾಗಬೇಕು
2 ನೇ ಆರೋಪಿಯ ಉತ್ತರ: ವಿಚಾರಣೆಯಾಗಬೇಕು
3 ನೇ ಆರೋಪಿಯ ಉತ್ತರ: ವಿಚಾರಣೆಯಾಗಬೇಕು

ಆರೋಪಿತರನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಅವರ ಹೇಳಿಕೆಯನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: **19.01.202026** -ಸಹಿ-

**(**ಅಮ್ರಿನ್ ಸುಲ್ತಾನ**),**
ಪ್ರಧಾನ ಪ್ರದನ್ಯಾದಂ ಕಡೂರು**.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ:**2980/ 2023**

ಆರೋಪಿ ಸಂಖ್ಯೆ : **2.** 2. ರೇವಣ್ಣ ಬಿನ್ ಸಿದ್ದಪ್ಪ, ಸುಮಾರು 33 ವರ್ಷ, ವಾಸ : ಬಿ ಕೋಡಿಹಳ್ಳಿ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ **251** ಅಡಿ ಪ್ರಕಾರ ಆರೋಪಿಯ ಹೇಳಿಕೆ:

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉ: ಹೌದು

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ: ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ ಕಡೂರು.